**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\7816\2015\ಪ್ರನಿಕಾಸ-2 DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17.9.2016

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** – ಪಾವಗಡ ತಾಲ್ಲೂಕು ಬೊಮ್ಮತನಹಳ್ಳಿ ಗ್ರಾಮದ ಸ. ನಂ: 4 ಕ್ಷೇತ್ರ 27ಎ., 13ಗು., ಜಮೀನಿನ ಪೈಕಿ 1ಎ., ಜಮೀನನ್ನು ಜನತಾ ಮನೆಗಾಗಿ ಸ್ವಧೀನಪಡಿಸಿಕೊಂಡಿದ್ದನ್ನು ದೂರುದಾರರ ಹೆಸರಿನಲ್ಲಿ ಪಹಣಿ ಪತ್ರಿಯಲ್ಲಿ ದುರಸ್ತಿ ಮಾಡಿಕೊಡುವ ಕುರಿತು.

*******

ಶ್ರೀ.ಎಸ್.ಶಿವಲಿಂಗಯ್ಯ, ಬಿನ್ ಪವತಿ ಸಂಜೀವಪ್ಪ ಬೊಮ್ಮತನಹಳ್ಳಿ, ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ತಿಮ್ಮಾಭೋವಿ, ತಹಶೀಲ್ದಾರ್, ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಪಾವಗಡ ತಾಲ್ಲೂಕು ಬೊಮ್ಮತನಹಳ್ಳಿ ಗ್ರಾಮದ ದೂರುದಾರರ ಜಮೀನು ಸ. ನಂ: 4 ಕ್ಷೇತ್ರ 27ಎ., 13ಗು., ಜಮೀನಿನಲ್ಲಿ ದಿ: 22.3.1976ರಂದು ಸರ್ಕಾರದವರು ಜನತಾ ಮನೆ ಕಟ್ಟಲು 1ಎ., ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಆದರೆ ದೂರುದಾರರು ಆ 1ಎ., ಸ್ವಾಧೀನಪಡಿಸಿಕೊಂಡ ಜಮೀನಿನ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದಿಸುವಂತೆ ಎದುರುದಾರರಿಗೆ ಅರ್ಜಿ

ಸಲ್ಲಿಸಿದರೂ ಸಹ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಸ್ವಾಧೀನಪಡಿಸಿಕೊಂಡ 1 ಎ., ಜಮೀನನ್ನು ಪಹಣಿ ಪತ್ರಿಯಲ್ಲಿ ನಮೂದಿಸಿ ಅದನ್ನು ಸರಿಪಡಿಸಿಕೊಡಬೇಕೆಂದು ವಿನಂತಿಸಿಕೊಂಡಿದ್ದಾರೆ.

3) ಈ ಪ್ರಕರಣದಲ್ಲಿ ಎದುರುದಾರರು ತೀರಿಕೊಂಡಿದ್ದಾರೆ ಅಂತ ವರದಿಯಾಗಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

4) ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಉಪ ವಿಭಾಗಾಧಿಕಾರಿಗಳು ಮಧುಗಿರಿ ಉಪ ವಿಭಾಗ ಇವರು ಸ. ನಂ: 4ರಲ್ಲಿ 1ಎ., ಜಮೀನನ್ನು ಅಧಿಸೂಚನೆ ಸಂ: ಎಲ್.ಎ.ಕ್ಯೂ ಎಸ್.ಆರ್. 242/73 ದಿ: 22.6.1984ರ ಪ್ರಕಾರ ಸ್ವಾಧೀನಪಡಿಸಿಕೊಂಡಿದ್ದಾರೆ ಈ ಬಗ್ಗೆ ದಾಖಲೆಯನ್ನು ದೂರುದಾರರು ಹಾಜರುಪಡಿಸಿದ್ದಾರೆ. ಸ. ನಂ:4ರ ಪಹಣಿ ಪತ್ರಿಕೆ ಲಭ್ಯವಿದ್ದು ಇದರಲ್ಲಿ 3ಎ., 30ಗು., ಹನುಮಕ್ಕ ಗಂಡ ಎಲ್ ಬಸಪ್ಪ ಇವರ ಹೆಸರಿನಲ್ಲಿ ಹಾಗೂ 21ಎ., 12ಗು., ಜಮೀನು ಹನುಮಕ್ಕ ಗಂಡ ಲಕ್ಕಪ್ಪ ಇವರ ಹೆಸರಿನಲ್ಲಿರುತ್ತದೆ. ಆದರೆ 1ಎ., ಜಮೀನನ್ನು ಸ್ವಾಧೀನಪಡಿಸಕೊಂಡ ಬಗ್ಗೆ ಪಹಣಿ ಪತ್ರಿಯಲ್ಲಿ ದಾಖಲಾಗಿರುವುದಿಲ್ಲ.

5) ದೂರುದಾರರ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಖಾತೆ ತಿದ್ದುಪಡಿ ಮಾಡುವುದು ಎದುರುದಾರರ ಕರ್ತವ್ಯವಾಗಿರುತ್ತದೆ. ಆದರೆ ಎದುರುದಾರರು ಮೃತರಾಗಿರುವುದರಿಂದ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ತಹಶೀಲ್ದಾರ್ ಪಾವಗಡ ರವರು ಇದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸ. ನಂ; 4ರಲ್ಲಿ 1 ಎ., ಜಮೀನನ್ನು ಜನತಾ ಮನೆಗಾಗಿ ಸ್ವಾಧೀನಪಡಿಸಿಕೊಂಡಿದ್ದನ್ನು ಪಹಣಿಯಲ್ಲಿ ನಮೂದಿಸಿ ತಿದ್ದುಪಡಿ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಪ್ರಸ್ತುತ ತಹಶೀಲ್ದಾರ್ ಪಾವಗಡ ಇವರು ಪಾವಗಡ ತಾಲ್ಲೂಕು ಬೊಮ್ಮತನಹಳ್ಳಿ ಗ್ರಾಮದ ಸ. ನಂ: 4 ಕ್ಷೇತ್ರ 27ಎ., 13ಗು., ಜಮೀನಿನ ಪೈಕಿ 1ಎ., ಜಮೀನನ್ನು ಜನತಾ ಮನೆಗಾಗಿ ಸ್ವಧೀನಪಡಿಸಿಕೊಂಡಿದ್ದನ್ನು ದೂರುದಾರರ ಹೆಸರಿನಲ್ಲಿ

ಪಹಣಿ ಪತ್ರಿಯಲ್ಲಿ ದುರಸ್ತಿ ಮಾಡಿಕೊಡಲು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

6) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 12/9/16

**(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**